‘ಪ್ರೀತಿ ಒಂದು ರಸ ವಿದ್ಯೆ. ಅದು ಎರಡು ಹೃದಯಗಳ ರಚನಾತ್ಮಕ ಮಧುರ ವಿನ್ಯಾಸ. ಅದೊಂದು ಪವಿತ್ರ ಜೀವನಪಥ. ಪ್ರೀತಿ ಅಂದರೆ ಹಾಲ್ನೊರೆ. ಮಿತಿಯಲ್ಲಿದ್ದರೆ ಹಾಲು. ಇಲ್ಲದಿದ್ದರೆ ಹಾಲಾಹಲ!’ ಮುಂತಾದ ನನ್ನೀ ಮಾತುಗಳು ಒಲುಮೆಯ ಭ್ರಾಮಕತೆಗೆ ಸಾಕ್ಷಿಯಾಗಿದ್ದವು. ಆಗತಾನೆ ಯವ್ವನಕ್ಕೆ ಕಾಲಿಟ್ಟ ಪೋರನ ಮಾತಿನಂತಿದ್ದವು. ಆವೇಶದಲ್ಲಿ, ಆರಾಧನೆಯಲ್ಲಿ ಮಾಡುವ ತಪ್ಪುಗಳಂತಿದ್ದವು. ವಿಶೇಷವೆಂದರೆ ಇವೆಲ್ಲವೂ ನನಗೂ ಮಾಯಿಗೆ ಮಾತ್ರ ಅರ್ಥವಾಗುತ್ತಿದ್ದವು. ಆದೇನೇ ಇರಲಿ, ನನ್ನೀ ಫಿಲಾಸಫಿಯನ್ನು ಬದಿಗಿಟ್ಟು ಸೂರಿಗೆ ಮನವರಿಕೆ ಮಾಡಲು ಯತ್ನಿಸಿದ್ದೆ.

‘ನೋಡು ಸೂರಿ, ಮಾಯಿ ಜೊತೆ ನಾನು ಮಾತನಾಡುತ್ತಿರುವುದು ಯಾವುದೇ ಉದ್ದೇಶದಿಂದ ಅಲ್ಲ. ಅವಳ ಸ್ನೇಹಕ್ಕೆ ಬೇರೆ ಅರ್ಥ ಕಲ್ಪಿಸಿಕೊಳ್ಳುವುದೂ ಬೇಡ. ಅವಳಿಂದ ನನಗೇನೂ ಆಗಬೇಕಿಲ್ಲ. ಸ್ವಾರ್ಥ ಇದ್ದಾಗ ಸಂಕೋಚ, ಸಣ್ಣತನ, ಕಟ್ಟಳೆಗಳು ಎದುರಾಗುತ್ತವೆ. ಅದು ನನಗಿಲ್ಲ’ ಎಂದಿದ್ದಕ್ಕೆ ಸುರೇಶನ ಮುಖ ಯಾಕೋ ಕೆಂಪಾಗಿತ್ತು. ನಾನೇನೆಂಬುದರ ಅರಿವೂ ಅವನಿಗಿದ್ದರೂ, ನಾನೆಲ್ಲಿ ಹಾದಿ ತಪ್ಪುವೆನೋ ಎಂಬ ಅವನ ಆತಂಕವೂ ನನ್ನ ಗಮನಕ್ಕೆ ಬರದೇ ಇರಲಿಲ್ಲ. ಇದೆಲ್ಲವನ್ನು ಮೀರಿ ಅವನ ಆತ್ಮ ಶಮನಗೊಳಿಸಲು ನಾನು ಯತ್ನಿಸಿದಾಗಲೆಲ್ಲಾ, ‘ನೀನು ನಿಜಕ್ಕೂ ಒಂದು ಕೇಸು. ಈ ಜನ್ಮದಲ್ಲಿ ಸುಧಾರಿಸಲ್ಲ’ ಎಂದು ಮೂದಲಿಸುತ್ತಿದ್ದ. ಮಾಯಿಯ ಗಮನಕ್ಕೆ ಈ ವಿದ್ಯಮಾನವನ್ನೆಲ್ಲ ತಂದಿದ್ದೆ.

‘ಅಲ್ರೀ, ನಿಮ್ ದೋಸ್ತಾ ಹೇಳೋದ್ರಲ್ಲಿ ತಪ್ಪೇನೈತಿ ಹೇಳ್ರಿ? ಮೊದಮೊದ್ಲು ನಾನೂ ಹಂಗ ಅಂದ್ಕೊಂಡಿದ್ದೆ. ನಮ್ದೂ ಲವ್ ಮ್ಯಾರೇಜ್. ನನ್ಗಂಡ ದೇವ್ರಂಥವ. ಅವ್ರಿಗೆ ನಾನೆಂದೂ ದ್ರೋಹ ಮಾಡಿಲ್ಲ. ಮಾಡೋದಿಲ್ಲ. ಆದ್ರಾ, ಯಾವ್ದೇ ಹೆಣ್ಣಿನ ರೂಪ ಗುಣ, ಅಂತಸ್ತು ನೋಡಿ ಹತ್ತಿರವಾಗುವುದು ಪವಿತ್ರ ಪ್ರೇಮದ ಲಕ್ಷಣವಲ್ಲ. ನಿರ್ವಿಕಾರ, ನಿರ್ಗುಣ, ನಿರ್ಮೋಹದಿಂದ ಇದ್ದಕಿದ್ದಂಗ ಹೇಳೋ ನಿಮ್ ಮಾತು, ಪ್ರೀತೀನ ಯಾವುದ್ಕ ಹೋಲಿಸಿದ್ರೂ ಕಮ್ಮೀನೆ... ಇಷ್ಟ್ ವರ್ಷಾತು, ನನ್ನಿಂದ ನೀವೇನೂ ಬಯಸಿಲ್ಲ. ಖರೇ ಹೇಳ್ಬೇಕೆಂದ್ರ, ಆ ನಿಸ್ವಾರ್ಥ ಗುಣವೇ ನನಗ ದುಃಖ ತರಿಸ್ತದ. ಆಗಾಗ ಕಾಡ್ತದ. ಸರಿತಪ್ಪು ಯಾವ್ದೂ ಕೇಳ್ಬ್ಯಾಡ್ರಿ. ಹತ್ತು ವರ್ಷಗಳ ಹಿಂದ ನೀವ್ ಸಿಕ್ಕಿದ್ರ ಕತೀನೇ ಬೇರೆ ಇರ್ತಿತ್ತು’ ಎಂದ ಮಾಯಿಯ ಧ್ವನಿಯಲ್ಲಿ ಮೊದಲ ಬಾರಿಗೆ ಏನೇನೋ ಮಾತು!

‘ಮಾಯೀ... ದುಃಖವಾದಾಗ ಆತ್ಮೀಯರ ಜೊತೆ ಹಂಚ್ಕೋ... ಮನಸಿಗೆ ನೆಮ್ಮದಿ ಆಗುತ್ತೆ. ನೀನಿರೋದೆಲ್ಲೋ... ಸ್ವಂತ ಊರು ಯಾವ್ದೋ ಗೊತ್ತಿಲ್ಲ. ಇದರರ್ಥ ಇಷ್ಟೇ: ನಿನಗೆ ಅನ್ನಿಸಿದ್ದನ್ನು ಒಂದು ಪತ್ರದಲ್ಲಿ ಬರಿ. ಮನಸು ನಿರಾಳವಾಗಬಹುದು’ ಎಂಬೊಂದು ಸಣ್ಣ ಸಲಹೆ ಕೊಡಲು ಯತ್ನಿಸಿದ್ದೆ.

‘ಬಾಷಾ, ಪತ್ರ ಬರೆಯ ಬೇಕೂಂತ ಬಯಸಿದಾಗ ಭಾವ ಇತ್ತು. ವಿಳಾಸ ಇರಲಿಲ್ಲ. ಬರಿಯ ಬೇಕು ಎಂಬ ಬಯಕೆ ಬೇಡಿದಾಗ ಭಾವ ಇಲ್ಲ. ಅದಕ್ಕ ವಿಳಾಸ ಇದ್ರೆಷ್ಟು, ಬಿಟ್ರೆಷ್ಟು?’

ಮಾಯಿಯ ಒಗಟಿನ ಮಾತು ಹೇಗೇ ಇರಲಿ, ಆವಳ ತಾತ್ವಿಕ ನೆಲೆ ಏನೇ ಇರಲಿ. ಆ ಭಾವದಲ್ಲಿ ಎಲ್ಲೋ ಶೋಕದ ಛಾಯೆ... ಕಳವಳ! ನಾನು ಬೇರೇನೂ ಕೆದಕಲಿಲ್ಲ.

*****

ಮನಸಿನ ಜೊತೆ, ಭಾವನೆಗಳ ಜೊತೆ, ಬದುಕಿನ ಜೊತೆ, ನೌಕರಿ ಜೊತೆ ನೀವು ಬೆರೆತು ಹೋದರೆ ಕಡು ಬೇಸಿಗೆಯಲ್ಲೂ ವಾತಾವರಣ ಕೂಲ್ ಅನ್ನಿಸುತ್ತದೆ ಎಂಬುದಕ್ಕೆ ನನ್ನ ಈ ಸ್ಥಿತಿಯೇ ಸಾಕ್ಷಿ.